**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

**ಸ್ಪೆಷಲ್ ಕೇಸ್ ನಂಃ 78/2022** ಪಿ.ಡಬ್ಲ್ಯೂ 3

ಸಿ.ಡಬ್ಲ್ಯೂ 3

| | |
|---|---|
| ಸಾಕ್ಷಿದಾರರ ಹೆಸರು | ಸುಕೇಶ್ |
| ತಂದೆಯ ಹೆಸರು | ಕುಶಲ |
| ವಯಸ್ಸು | 29 ವರ್ಷ |
| ಉದ್ಯೋಗ | ಪೈಂಟಿಂಗ್ |
| ವಿಳಾಸ | ಆರೂರು, ಬಂಗ್ಲೆಗುಡ್ಡೆ |

ದಿನಾಂಕಃ 10-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ಚಾಸಾ-1 ನನ್ನ ತಮ್ಮ. ನಾವು ಆದಿ ದ್ರಾವಿಡ ಜನಾಂಗಕ್ಕೆ ಸೇರಿದ್ದೇನೆ. ಅದು ಪರಿಶಿಷ್ಟ ಜಾತಿಯಲ್ಲಿ ಬರುತ್ತದೆ. ಚಾಸಾ-2 ಗೊತ್ತು, ಅವರು ಕುಡುಬಿ ಜನಾಂಗಕ್ಕೆ ಸೇರಿದವರು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು. ಅವರು ಬೇರೆ ಜಾತಿಯವರು. ಅವರಿಗೆ ನನ್ನ ಜನಾಂಗದ ಬಗ್ಗೆ ಗೊತ್ತು. ನಾನು ಮತ್ತು ಚಾಸಾ-1, ಚಾಸಾ-2 ಇವರ ಜೊತೆ ಪೈಂಟಿಂಗ್ ಕೆಲಸಕ್ಕೆ ಹೋಗುತ್ತೇವೆ.

2) ತಾರೀಕು 14-05-2022 ರಂದು ನಾನು, ಚಾಸಾ-1 ಮತ್ತು 2 ಬಾರ್ಕೂರಿಗೆ ಪೈಂಟಿಂಗ್ ಕೆಲಸಕ್ಕೆ ಹೋಗಿದ್ದೆವು. ಆಗ ಅಲ್ಲಿ ಇದ್ದ ಜಾತ್ರೆಗೆ ಚಾಸಾ-2 ನಮ್ಮನ್ನು ಕರೆದಿದ್ದರು, ಅದು ಅವರ ಊರಿನ ಜಾತ್ರೆ. ಆದಿನ ನಾವು ರಾತ್ರಿ ಸುಮಾರು 9.30 ಗಂಟೆಯ ಸಮಯಕ್ಕೆ ಹೋಗಿದ್ದೆವು. ಅದು ಕೆಂಜೂರು ವೀರೇಶ್ವರ ಜಾತ್ರೆ. ಜಾತ್ರೆಯಲ್ಲಿ ಓಡಾಡಿ, ರಾತ್ರಿ 11.30 ಗಂಟೆಯ ಸಮಯಕ್ಕೆ ದೇವಸ್ಥಾನದ ಬಳಿ ಗದ್ದೆಯಲ್ಲಿ ಐಸ್ ಕ್ರೀಮ್ ತಿನ್ನುತ್ತಿದ್ದೆವು. ಆಗ 1 ನೇ ಆರೋಪಿ, ಚಾಸಾ-2 ಇವರಿಗೆ ನೂಕಿಕೊಂಡು ಹೋದರು, ಅದಕ್ಕಾಗಿ ಚಾಸಾ-2, ಜಾತ್ರೆಯಲ್ಲಿ ಏಕೆ ಹಾಗೆ ತಾಗಿಕೊಂಡು ಹೋಗುವುದು ಎಂದು ಹೇಳಿದ್ದರು, ಆಗ 1 ನೇ ಆರೋಪಿತನೊಂದಿಗೆ,

2 ರಿಂದ 6 ನೇ ಆರೋಪಿತರು ಇದ್ದರು. ಆಗ 1 ನೇ ಆರೋಪಿತ ಮತ್ತು ಆತನೊಂದಿಗೆ ಇದ್ದ ಎಲ್ಲರೂ ನಮಗೆ ಹಲ್ಲೆ ಮಾಡಲು ಬಂದಿದ್ದರು. ಆಗ ನಾನು ಪರಿಶಿಷ್ಟರು ಎಂದು ನಮ್ಮೊಂದಿಗೆ ತಂಟೆ ಮಾಡಬಾರದೆಂದು ಹೇಳಿದ್ದೆವು. ಆಗ ನೀವು ಕೂಸಾಳು ಏನು ಮಾಡುತ್ತೀರಿ ಎಂದು 1 ನೇ ಆರೋಪಿ ಹೇಳಿದ್ದ, ನಿನ್ನ ಜನ ಇದ್ದರೆ ತರಿಸು, ನೀನು ಏನು ಸಾಂಟಾ ಹರಿತ್ತೀಯಾ ಎಂದು ಬೈದರು. ಆರೋಪಿತರು ಚಾಸಾ-2 ಈತನಿಗೆ ಹಲ್ಲೆ ಮಾಡಲು ಬಂದರು, ನಾನು ಮತ್ತು ಚಾಸಾ-1 ತಡೆಯಲು ಹೋಗಿದ್ದೆವು. 1,2, ಮತ್ತು 4 ನೇ ಆರೋಪಿತರು ಚಾಸಾ-1 ಈತನ ಜುಟ್ಟನ್ನು ಹಿಡಿದು ಕೆಳಗೆ ಹಾಕಿದ್ದರು, ಮತ್ತು ಕಾಲಿನಿಂದ ತುಳಿದಿದ್ದರು. ಆಗ ನಾನು ಮತ್ತು ಚಾಸಾ-2 ಆತನನ್ನು ಬಿಡಿಸಿದ್ದೆವು. ಆಗ ಆರೋಪಿರೆಲ್ಲರೂ ನಮಗೂ ಸಹ ಕೈಗಳಿಂದ ಹಲ್ಲೆ ಮಾಡಿದ್ದರು. ಆಗ ದೇವಸ್ಥಾನದ ಕಮಿಟಿಯವರು ಬಂದಿದ್ದರು, ಆಗ ಆರೋಪಿತರು ಓಡಿದ್ದರು. ಆರೋಪಿತರ ಹಲ್ಲೆಯಿಂದ ಚಾಸಾ-1 ಈತನ ಮೂಗಿನ ಮೇಲೆ ರಕ್ತ ಬಂದಿತ್ತು ಮತ್ತು ಬಲಕಣ್ಣಿಗೆ ಪೆಟ್ಟಾಗಿತ್ತು. ಕೈಗಳಿಗೆ ಪೆಟ್ಟಾಗಿತ್ತು. ಆರೋಪಿತರ ಹಲ್ಲೆಯಿಂದ ನನಗೆ ಗಾಯಗಳು ಆಗಿರಲಿಲ್ಲ. ಚಾಸಾ-1 ಈತನನ್ನು ಅಟೋದಲ್ಲಿ ಮೊದಲು ಮನೆಗೆ ಕರೆತಂದು, ನಂತರ ಚಾಸಾ-1 ಈತನನ್ನು ಅಂಬ್ಯುಲೆನ್ಸ ನಲ್ಲಿ ಆಸ್ಪತ್ರೆಗೆ ಸೇರಿಸಿದ್ದೆವು.

3) ಮಾರನೇ ಪೊಲೀಸರು ಆಸ್ಪತ್ರೆಗೆ ಬಂದಿದ್ದರು, ಅಲ್ಲಿ ಚಾಸಾ-1 ಹೇಳಿದಂತೆ ನಾನು ಬರೆದಿದ್ದೆ. ಆ ದೂರನ್ನು ಪೊಲೀಸರು ತೆಗೆದುಕೊಂಡಿದ್ದರು.ಆ ದೂರಿಗೆ ನಾನು ಸಹ ಸಹಿ ಮಾಡಿದ್ದೇನೆ. ಸದರಿ ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು,ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ನಿಶಾನೆ ಪಿ-1(ಬಿ) ಎಂದು ಗುರುತಿಸಿದ್ದೇನೆ. ಚಾಸಾ-1, 17 ನೇ ತಾರೀಕಿನವರೆಗೆ ಆಸ್ಪತ್ರೆಯಲ್ಲಿ ಉಪಚಾರ ಪಡೆದಿದ್ದರು. ಪೊಲೀಸರು ನನ್ನನ್ನು ವಿಚಾರಿಸಿ, ನನ್ನ ಹೇಳಿಕೆ ಪಡೆದಿದ್ದರು.

4) ತಾರೀಕು 16-05-2022 ರಂದು ನನ್ನನ್ನು ಡಿ.ವೈ.ಎಸ್ಪಿ ಕಚೇರಿಗೆ ಕರೆದಿದ್ದರು. ಅಲ್ಲಿ ಆರೋಪಿತರನ್ನು ನೋಡಿ ಗುರುತಿಸಿ, ಹೇಳಿಕೆ ಕೊಟ್ಟಿದ್ದೆ. ಆದಿನ ಹಲ್ಲೆ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಈಗ ನ್ಯಾಯಾಲಯದಲ್ಲಿರುವ ಆರೋಪಿತರು ಅಲ್ಲದೆ, ಇನ್ನು ಇಬ್ಬರು ಇದ್ದರು, ಅವರನ್ನು

ಗುರುತಿಸವಲ್ಲಿ ತಕರಾರು ಇಲ್ಲ. ಈ ಮೊದಲು ಆರೋಪಿತರಿಗೂ ಮತ್ತು ಚಾಸಾ-2 ಇವರಿಗೆ ತಂಟೆಯಾಗಿದ್ದು, ಆ ಹಿನ್ನಲೆಯಲ್ಲಿ ಆದಿನ ಗಲಾಟೆ ಆಗಿತ್ತು ಎಂದು ತಿಳಿದಿತ್ತು.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಸ್. ಎಸ್.ಎನ್. ವಕೀಲರಿಂದ**

1) ತಾರೀಕು 16-05-2022 ರಂದು ಡಿ.ವೈ.ಎಸ್ಪಿ ಕಚೇರಿಯಲ್ಲಿ ಆರೋಪಿತರ ಬಗ್ಗೆ ಪೊಲೀಸರು ಹೇಳಿದ್ದರಿಂದ ನನಗೆ ಗೊತ್ತಾಯಿತು ಎಂದರೆ, ಗೊತ್ತಾಯಿತು. ಪೊಲೀಸರಿಗೆ ಹೇಳಿಕೆ ಕೊಟ್ಟಾಗ ಚಾಸಾ-1 ಈತನ ಎಡಕಣ್ಣಿಗೆ ಪೆಟ್ಟಾಗಿತ್ತು ಎಂದು ಹೇಳಿಲ್ಲ. ಚಾಸಾ-1 ಈತನ ಎಡಕಣ್ಣಿಗೆ ಪೆಟ್ಟಾಗಿತ್ತು ಎಂದು ಹೇಳಿಲ್ಲ. ಆರೋಪಿತರ ಜಾತಿ ಯಾವುದು ಎಂದು ನಮಗೆ ಮತ್ತು ನಮ್ಮ ಜಾತಿ ಯಾವುದು ಎಂದು ಆರೋಪಿತರಿಗೆ ಡಿ.ವೈ.ಎಸ್ಪಿ ಕಚೇರಿಯಲ್ಲಿಯೇ ಗೊತ್ತಾಗಿತ್ತು ಎಂದರೆ ಸರಿಯಲ್ಲ.

2) ನಾನು ಡಿ.ಎಸ್.ಎಸ್. ನ ಕಾರ್ಯದರ್ಶಿ. ಪೊಲೀಸರು ಕರೆದ ಮೀಟಂಗ್ ಗಳಿಗಾಗಿ ನಾನು ಹೋಗುತ್ತೇನೆ ಎಂದರೆ ನಿಜ. ನಾನು ಪೊಲೀಸರಿಗೆ ಆತ್ಮೀಯನಾಗಿದ್ದರಿಂದ, ನಾವು ಕೊಟ್ಟ ದೂರಿಗಾಗಿ ಪೊಲೀಸರು ಆರೋಪಿತರ ಮೇಲೆ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನಾವು ಪರಿಶಿಷ್ಟ ಜಾತಿಯವರು ಎಂದು ಆರೋಪಿತರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತಹ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯವಿಚಾರಣೆಯಲ್ಲಿ ಹೇಳಿದಂತಹ ಯಾವುದೇ ಘಟನೆಯಾಗಿಲ್ಲ ಎಂದರೆ ಸರಿಯಲ್ಲ.

3) ನಾನು ಮತ್ತು ಚಾಸಾ-2 ಆತ್ಮೀಯರು. ಆದ್ದರಿಂದ, ಚಾಸಾ-2 ಇವರಿಗೆ ಸಹಾಯ ಮಾಡಲು ಆರೋಪಿತರ ಮೇಲೆ ಒಂದು ಸುಳ್ಳು ದೂರು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

-ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ /ವಿಶೇಷ ನ್ಯಾಯಾಧೀಶರು,
ಉಡುಪಿ.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅವಕಾಶ ಕೊರಿದ್ದು ಸರಕಾರಿ ಅಭಿಯೋಜಕರಿಗೆ ಪಾಟೀಸವಾಲಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲುಃ ಸರಕಾರಿ ಅಭಿಯೋಜಕರಿಂದಃ**